# ಡಯಾನಾ ಸೊಸೆ



ಬ್ರಿಟನ್ನಿನಲ್ಲಿ ಇವತ್ತು ಅತ್ಯಂತ ಹೆಚ್ಚು ಫೋಟೊಗ್ರಾಫ್‌ಗೆ ಆಹಾರವಾಗಿರುವ ತರುಣಿ ಕ್ಯಾಥರೀನ್ ಮಿಡ್ಲ್‌ಟನ್! 28ರ ಹರೆಯದ ಈಕೆ ಡಯಾನಾಳ ಭಾವಿ ಸೊಸೆ. ಡಯಾನಾ ಮತ್ತು ಚಾರ್ಲ್ಸ್‌ನ ಮಗ ವಿಲಿಯಂ ಈಕೆಯನ್ನು ಮುಂದಿನ ಏಪ್ರಿಲ್ 29ರಂದು ಮದುವೆಯಾಗುವುದು ನಿಶ್ಚಯವಾಗಿದೆ. ಕಳೆದ 9 ವರ್ಷಗಳಿಂದ ಇಬ್ಬರೂ ಕೂಡಿ ಓಡಾಡುತ್ತಿದ್ದಾರೆ. ಇಂಗ್ಲೆಂಡಿನ ಟ್ಯಾಬ್ಲಾಯ್ಡ್‌ಗಳಲ್ಲಿ 'ವೇಲ್ಸ್ ರಾಜಕುಮಾರಿ'ಯ ಮದುವೆಯದ್ದೇ ಸುದ್ದಿ.

ವಿಲಿಯಂಗೆ ಕೇಟ್‌ಳ (ಇದು ಈಕೆಯ ನಿಕ್‌ನೇಮ್) ಪರಿಚಯವಾದದ್ದು ಸೈಂಟ್ ಆ್ಯಂಡ್ರೂಸ್‌ನಲ್ಲಿ. ಕಲಾ ಇತಿಹಾಸ ಪದವಿ ಓದುತ್ತಿದ್ದ ಕೇಟ್‌ಳ ಪರಿಚಯವಾದ ಎರಡನೇ ವರ್ಷಕ್ಕೆ, ಇಬ್ಬರೂ ಹಾಸ್ಟೆಲ್‌ನಲ್ಲಿ ಒಂದೇ ರೂಮ್‌ನಲ್ಲಿ ಇರತೊಡಗಿದರು. ಆ ಸ್ನೇಹವೀಗ ಮದುವೆಯವರೆಗೆ ಬಂದಿದೆ. ಡಯಾನಾಳಂತೆಯೇ ಕೇಟ್ ಕೂಡಾ ಸಾಮಾನ್ಯ ಕುಟುಂಬದ ಹುಡುಗಿ. ಆಕೆಯ ಅಪ್ಪ-ಅಮ್ಮನಿಗೆ 'ಪಾರ್ಟಿ ಪೀಸಸ್' ಎಂಬ ಸಣ್ಣದೊಂದು ಮಳಿಗೆಯಿದೆ. ಸಂಸತ್ತಿನಲ್ಲಿ ಮದುವೆಯ ಸುದ್ದಿ ಪ್ರಕಟವಾದಾಗ ಎಲ್ಲರೂ ಎದ್ದು ನಿಂತು ಚಪ್ಪಾಳೆ ತಟ್ಟಿದ್ದರು. ಮೊನ್ನೆ ಈ ಇಬ್ಬರ ಮುಖಗಳನ್ನು ಕೆತ್ತಿದ ಗಿಫ್ಟ್ ನಾಣ್ಯವೊಂದು ಬಿಡುಗಡೆಯಾಗಿದೆ. ಆದರೆ ಆ ನಾಣ್ಯದಲ್ಲಿ ಇರುವ ಮುಖ ಕೇಟ್‌ಳನ್ನು ಹೋಲುತ್ತಿಲ್ಲ ಎಂಬ ತಕರಾರೂ ಎದ್ದಿದೆ. ಕೇಟ್ ಮಿತಭಾಷಿಣಿ; ಪ್ರಚಾರದಿಂದ ಗಾವುದ ದೂರವಂತೆ. ಆದರೆ ಛಾಯಾಗ್ರಾಹಕರು ಆಕೆಯ ಬೆನ್ನು ಬಿಡುತ್ತಿಲ್ಲ. ಈ ವಿಷಯದಲ್ಲಿ ಕೇಟ್, ಅತ್ತೆ ಡಯಾನಾಳನ್ನೂ ಮೀರಿಸುವಂತೆ ಕಾಣುತ್ತಿದೆ!

# ಸಿಲಿಕಾನ್ ವ್ಯಾಲಿ ಸರದಾರ



'ಅಮೆರಿಕದ ಆರ್ಥಿಕತೆ ಚೇತರಿಸಬೇಕಾದರೆ ಸ್ಟೀವ್ ಜಾಬ್ಸ್‌ನಂತಹ ಉದ್ಯಮಿಗಳ ಸಂಖ್ಯೆ ಹೆಚ್ಚಬೇಕು' ಎಂದು ಅಧ್ಯಕ್ಷ ಒಬಾಮಾ ಹೇಳಿದ್ದೇ ತಡ, ಸ್ಟೀವ್ಸ್‌ಗೆ ಪ್ರಚಾರದ ಲಾಟರಿ ಹೊಡೆದಿದೆ. ಎಲ್ಲಿ ನೋಡಿದರೂ ಸ್ಟೀವ್ಸ್ ಸುದ್ದಿ! ಬಿಲ್ ಗೇಟ್ಸ್‌ಅನ್ನು ಕೈಬಿಟ್ಟು ಒಬಾಮಾ ಸ್ಟೀವ್ಸ್ ಕೈಹಿಡಿದದ್ದೇಕೆ.. ಎನ್ನುವುದೀಗ ಚರ್ಚೆಯ ವಿಷಯ.

ಸ್ಟೀವ್ಸ್ ಅಮೆರಿಕದ ಶ್ರೀಮಂತರಲ್ಲಿ 42ನೇ ಸ್ಥಾನದಲ್ಲಿದ್ದಾನೆ. 'ಆದರೆ ಕ್ರಾಂತಿಕಾರಿ ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಟ್ಟು ಲಕ್ಷಾಂತರ ಹೊಸ ಉದ್ಯೋಗಗಳನ್ನು ಸೃಷ್ಟಿಸುವಲ್ಲಿ ಮುಂಚೂಣಿಯಲ್ಲಿದ್ದಾನೆ' ಎನ್ನುವುದು ಒಬಾಮಾ ಹೊಗಳಿಕೆ. ಆ್ಯಪಲ್ ಕಂಪೆನಿಯ ಜಂಟಿ ಸ್ಥಾಪಕ ಸ್ಟೀವ್ಸ್ 70ರ ದಶಕದಲ್ಲಿ ಆ್ಯಪಲ್-2 ಸರಣಿ ತಂದದ್ದು ದೊಡ್ಡ ಕ್ರಾಂತಿಯನ್ನೇ ಉಂಟುಮಾಡಿತ್ತು. 90ರಲ್ಲಿ ಕಂಪೆನಿ ಬಿಟ್ಟ ಸ್ಟೀವ್ಸ್ ನೆಕ್ಸ್ಟ್ ಎಂಬ ಸಾಫ್ಟ್‌ವೇರ್ ಪ್ಲಾಟ್‌ಫಾರ್ಮ್ ಅಭಿವೃದ್ಧಿ ಕಂಪೆನಿ ಹುಟ್ಟು ಹಾಕಿ ಮತ್ತೆ ಸುದ್ದಿ ಮಾಡಿದ. 96ರಲ್ಲಿ ಹೊಸ ಕಂಪೆನಿಯನ್ನು ಆ್ಯಪಲ್‌ಗೇ ಮಾರಿ ಆ್ಯಪಲ್‌ನ ಸಿಇಓ ಆದ. ಈಚೆಗೆ ಈತ ಬಿಡುಗಡೆ ಮಾಡಿದ ಐಫೋನ್-4 ಹೊಸ ಜನಾಂಗದ ತಂತ್ರಜ್ಞಾನದಲ್ಲಿ ಇನ್ನೊಂದು ದೊಡ್ಡ ಹೆಜ್ಜೆ. ನಡುವೆ ಪಿಕ್ಸಾರ್ ಎನಿಮೇಶನ್ ಕಂಪೆನಿ ಹುಟ್ಟುಹಾಕಿ, ಅದನ್ನು ವಾಲ್ಟ್ ಡಿಸ್ನಿಯಲ್ಲಿ ವಿಲೀನಗೊಳಿಸಿ ಡಿಸ್ನಿ ಕಂಪೆನಿಯ ನಿರ್ದೇಶಕನೂ ಆದ ಸ್ಟೀವ್ಸ್, ಹೊಸ ಕಂಪೆನಿ ಹುಟ್ಟುಹಾಕುವಲ್ಲಿ ಯುವಜನರಿಗೆ ಸದಾ ಸ್ಫೂರ್ತಿದಾಯಕ. ರೀಡ್ ಕಾಲೇಜಿನ ಡ್ರಾಪೌಟ್ ಯುವಕನೊಬ್ಬ ಹೀಗೆ ದೊಡ್ಡ ಉದ್ಯಮಿಯಾಗಿ ಬೆಳೆದದ್ದೂ ಒಂದು ಕ್ರಾಂತಿಯೇ.

6 ವರ್ಷಗಳ ಕೆಳಗೆ ತನಗಾದ ಕ್ಯಾನ್ಸರ್ ಗಡ್ಡೆ ತೆಗೆಸಿ ಹಾಕಿ, ಈಗಲೂ ಚಟುವಟಿಕೆಯಿಂದ ಇರುವ ಸ್ಟೀವ್ಸ್ ಬಳಿ 40 ಶತಕೋಟಿ ಡಾಲರ್ ನಗದು ಇದೆಯಂತೆ! 6.1 ಶತಕೋಟಿ ಡಾಲರ್ ಬೆಲೆ ಬಾಳುವ ಈ ಆಸ್ತಿವಂತ, ಆ್ಯಪಲ್ ಕಂಪೆನಿಯಿಂದ ಪಡೆಯುವ ಸಂಬಳ ಮಾತ್ರ ತಿಂಗಳಿಗೆ ಒಂದು ಡಾಲರ್! ಅದಕ್ಕೆಂದೇ ಒಬಾಮಾ ಈತನನ್ನು ಹಾಡಿ ಹೊಗಳಿರಬೇಕು!

# ರಾಜಕೀಯಕ್ಕೆ ಎಂಟ್ರಿ?

ಆಂಧ್ರದ ರಾಜಕೀಯಕ್ಕೂ ಸಿನಿಮಾರಂಗಕ್ಕೂ ಫೆವಿಕಾಲ್ ನಂಟು. ಈಗಾಗಲೆ ಡಜನ್‌ಗೂ ಹೆಚ್ಚು ನಟ-ನಟಿಯರು ರಾಜಕೀಯಕ್ಕೆ ನುಗ್ಗಿದ್ದಾರೆ. ಇನ್ನಷ್ಟು ಜನ ನುಗ್ಗಲು ಕ್ಯೂ ನಿಂತಿದ್ದಾರೆ. ಈ ಕ್ಯೂನಲ್ಲಿ ಜೂನಿಯರ್ ಎನ್‌ಟಿಆರ್ ಮುಂಚೂಣಿಯಲ್ಲಿದ್ದಾರೆ ಎನ್ನುವುದು ಹೊಸ ಸುದ್ದಿ.

ಹಾಗೆ ನೋಡಿದರೆ, ಕಳೆದ ಚುನಾವಣೆಯಲ್ಲೇ ಜೂನಿಯರ್ ಎನ್‌ಟಿಆರ್ ರಾಜಕೀಯಕ್ಕೆ ಧುಮುಕುವ ಸುದ್ದಿ ಇತ್ತು. ಚಂದ್ರಬಾಬು ಅವರ ತೆಲುಗು ದೇಶಂ ಪರವಾಗಿ ಪ್ರಚಾರಕ್ಕೂ ಜೂನಿಯರ್ ಹಾಜರಾಗಿದ್ದರು. ಆದರೆ ಎಲೆಕ್ಷನ್‌ನಲ್ಲಿ ಹೆಚ್ಚಿನ ಫಲ ಸಿಗಲಿಲ್ಲ.



ಅದೇ ವೇಳೆ ಚಿರಂಜೀವಿಯ ಹೊಸ ಪಾರ್ಟಿ ಹುಟ್ಟಿದ್ದೂ ಅದಕ್ಕೊಂದು ಕಾರಣ. ಚಂದ್ರಬಾಬು ನಾಯ್ಡು ಬೆಳೆನಷ್ಟ ಹೊಂದಿದ ರೈತರಿಗೆ ಪರಿಹಾರ ನೀಡಬೇಕೆಂದು ಒತ್ತಾಯಿಸಿ ವಾರವಿಡೀ ಉಪವಾಸ ಕುಳಿತಲ್ಲಿಗೆ ಬಂದ ಜೂನಿಯರ್, ಕಾಂಗ್ರೆಸ್ ಸರಕಾರದ ವಿರುದ್ಧ ಗುಟುರು ಹಾಕಿದ್ದಾರೆ. ನಾಯ್ಡು ನೇತೃತ್ವದಲ್ಲಿ ಕಳೆಗುಂದಿರುವ ತೆಲುಗುದೇಶಂ ಉದ್ಧಾರ ಆಗಬೇಕಾದರೆ, ಜೂನಿಯರ್ ನೇರ ರಾಜಕೀಯಕ್ಕೆ ನುಗ್ಗಬೇಕು ಎನ್ನುವುದು ಪಕ್ಷದೊಳಗಿನ ಚಿಂತನೆ. ಜೂನಿಯರ್ ಸಿನಿಮಾಗೆ ಬಂದು ಹತ್ತು ವರ್ಷವಾಯ್ತು. ಲಕ್ಷಾಂತರ ಅಭಿಮಾನಿಗಳಿದ್ದಾರೆ. ಸಿನಿಮಾಗಳೂ ಸೂಪರ್‌ಹಿಟ್ ಆಗುತ್ತಿವೆ. ಇದೇ ಸಕಾಲ ಎಂದು ಜೂನಿಯರ್‌ಗೂ ಅನ್ನಿಸಿದೆಯಂತೆ! ಆದರೆ ಸದ್ಯಕ್ಕೆ ಇಲೆಕ್ಷನ್ ಇಲ್ಲವಲ್ಲ ಅನ್ನೋದೇ ಟಿಡಿಪಿ ನಾಯಕರ ಚಿಂತೆ!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65